

ಜಾಣರ ಪೆಟ್ಟಿಗೆ

## ತುಂಡುಡುಗೆಯದು ಮಜಾ ಅಲ್ಲ

ಮಜಾ ಟಾಕೀಸ್ ಮುದ ನೀಡುತ್ತಿದೆ. ಆದರೆ ಈ ಮಜಾ ಟಾಕೀಸಿಗೆ ಬರುವ ನಟೀಮಣಿಗಳು ಮಾತ್ರ ಅಶ್ಲೀಲ ತುಂಡುಡುಗೆ ಧರಿಸಿ ವೀಕ್ಷಕರಿಗೆ ಮುಜುಗರ ತರುತ್ತಾರೆ. ತುಂಡುಡುಗೆ ತೊಟ್ಟ ಈ ನಟೀಮಣಿಗಳು ಸೋಫಾದಲ್ಲಿ ಕೂರಲು ಹರಸಾಹಸ ಪಡುವುದನ್ನು ನೋಡಿದರೆ ಅಸಹ್ಯವಾಗುತ್ತದೆ. ಮೈ ತುಂಬಾ ಬಟ್ಟೆ ತೊಟ್ಟು ಬರುವ ನಟಿಯರನ್ನು ಛೇಡಿಸಿ ಕಾಲೆಳೆಯುವ ಸೃಜನ್ ಲೋಕೇಶ್ ಅವರು ಈ ತುಂಡುಡುಗೆಯ ನಟಿಯರ ವಿಚಾರವಾಗಿ ತುಟಿಪಿಟಕ್ ಎನ್ನದಿರುವುದು ಬೇಸರದ ಸಂಗತಿ.

ಇತ್ತೀಚೆಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಹಿರಿಯ ನಟಿಯೊಬ್ಬರ ದಿರಿಸು ಹೇಗಿತ್ತೆಂದರೆ ಈ ಡ್ರೆಸ್ಸನ್ನು ಎಲ್‌ಕೆಜಿಯ ಹೆಣ್ಣು ಮಕ್ಕಳೂ ಧರಿಸಲಾರರು.

—ಪಿ.ಜೆ. ರಾಘವೇಂದ್ರ, ಮೈಸೂರು

## ತಂಗಿ ಪಾತ್ರವೆಲ್ಲಿ?

ಉದಯ ಚಾನೆಲ್‌ನಲ್ಲಿ ರಾತ್ರಿ 9.30ಕ್ಕೆ 'ಸಾಕ್ಷಿ' ಧಾರಾವಾಹಿ ಪ್ರಸಾರವಾಗುತ್ತಿದೆ. ಇದು ಉತ್ತಮವಾಗಿ ಮೂಡಿಬರುತ್ತಿದೆ. ಆದರೆ ಧಾರಾವಾಹಿಯ ಪ್ರಾರಂಭದ ಕಂತುಗಳಲ್ಲಿ ಕಾಣಿಸಿಕೊಂಡಿದ್ದ ಸರಯೂಳ ತದ್ವಿರುದ್ಧ ಸ್ವಭಾವದ, ಎಲ್ಲೋ ದೂರದಲ್ಲಿ ಓದುತ್ತಿದ್ದ ಅವಳ ತಂಗಿ ಸರಯೂ ಮದುವೆ, ತಮ್ಮನ ಅಕಾಲಿಕ ಸಾವು ಇಂತಹ ಘಟನೆಗಳು ನಡೆದಾಗಲೂ ಪತ್ತೆಯೇ ಇಲ್ಲ. ಹಾಗೆಯೇ ಅಪ್ಪ, ಅಮ್ಮ, ಅಕ್ಕ ಸರಯೂ ಯಾರೂ ಅವಳ ಹೆಸರೇ ಎತ್ತುವುದಿಲ್ಲ. ಅನಗತ್ಯವಾದ ಇಂತಹ ಪಾತ್ರದ ಅವಶ್ಯಕತೆ ಇತ್ತೆ?

—ಮೀರಾ ಮೋಹನ್, ಬೆಂಗಳೂರು

**ವಾರದ ಪತ್ರ**

## ವೀಕ್ಷಕರಿಗೆ ಮನ್ನಣೆ ಎನ್ನುವ ಕನಸು

ಯಾವುದೇ ಕಾರ್ಯಕ್ರಮ ಟಿವಿಯಲ್ಲಿ ಬಂದರೂ ಅದಕ್ಕೆ ಸಂಬಂಧಿಸಿದಂತೆ ವೀಕ್ಷಕರ ಅನಿಸಿಕೆ. ಅಭಿಪ್ರಾಯ ತಿಳಿಸಲು ಕೋರುತ್ತಾರೆ. ಆದರೆ ಯಾರೂ ವೀಕ್ಷಕರ ಅಭಿಪ್ರಾಯವೇನು ಎಂಬುದನ್ನು ತಿಳಿಸುವುದಿಲ್ಲ, ಬಹಿರಂಗಪಡಿಸುವುದಿಲ್ಲ. ಅವರ ಅಭಿಪ್ರಾಯಕ್ಕೆ ಆದ್ಯತೆ, ಮನ್ನಣೆ ಕೊಡುತ್ತಾರೇನೋ ಎಂದರೆ ಅದೂ ಇಲ್ಲ. ತಮ್ಮ ಇಷ್ಟದಂತೆಯೇ ಧಾರಾವಾಹಿ, ಶೋ, ರಿಯಾಲಿಟಿ ಶೋ ನಡೆಸುತ್ತಾರೆ. ಹಾಗಾದರೆ ತೋರಿಕೆಗಾಗಿ ತಿಳಿಸುವ ಅವಶ್ಯಕತೆ ಏನು? ಒಬ್ಬರಾದರೂ ಪತ್ರ ಬರೆದರೆ ಕನಿಷ್ಠ ಅವರ ಅನಿಸಿಕೆ, ಅಭಿಪ್ರಾಯದ ಕಡೆ ಗಮನ ಕೊಡಲಿ. ಅದೂ ಇಲ್ಲದಿರುವಾಗ ಫೋನ್, ಎಸ್‌ಎಂಎಸ್, ಇಮೇಲ್‌ನಲ್ಲೂ ಅವರು ವೀಕ್ಷಕರ ಮಾತಿಗೆ ಮನ್ನಣೆ ಕೊಡುತ್ತಾರೆ ಎಂಬ ಬಗ್ಗೆ ಭರವಸೆ ಏನು? ಫೋನ್ ಮಾಡಿದರೆ ಕನಿಷ್ಠ ಸೌಜನ್ಯಕ್ಕಾದರೂ 'ನಮಸ್ಕಾರ, ಧನ್ಯವಾದ' ಹೇಳುವುದಿಲ್ಲ. 'ಬೇಕಾದ್ರೆ ನಮ್ಮ ಸೀರಿಯಲ್ ನೋಡ್ರಿ, ಇಲ್ಲಾಂದ್ರೆ ಚಾನೆಲ್ ಚೇಂಜ್ ಮಾಡಿ ಬೇರೆ ನೋಡ್ರಿ' ಎಂದು ಹೇಳುತ್ತಾರೆ. ಒಮ್ಮೊಮ್ಮೆ ಗಂಟೆಗಟ್ಟಲೆ ಫೋನ್ ರಿಸೀವ್ ಮಾಡುವುದಿಲ್ಲ, ಪ್ರತಿಕ್ರಿಯೆ ನೀಡದ ಚಾನೆಲ್‌ಗಳ ಧೋರಣೆ ಸರಿಯಲ್ಲ.

—ಎನ್.ಎಸ್. ಅಶ್ವಿನಿ, ತಿಪಟೂರು

## ಸಮಸ್ಯೆಗೆ ಸ್ಪಂದಿಸುವ ಡ್ರಾಮಾ

ಡ್ರಾಮಾ ಜೂನಿಯರ್ಸ್ ಅದ್ಭುತವಾಗಿ ಮೂಡಿಬರುತ್ತಿದೆ. ಸಮಾಜದ ಪ್ರಮುಖ ಸಮಸ್ಯೆಗಳತ್ತ ಬೆಳಕು ಚೆಲ್ಲುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ. 9.7.16 ರಂದು ಪ್ರಸಾರವಾದ ಡ್ರಾಮಾ ಜೂನಿಯರ್, ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ನನ್ನಂತಹ ಹಲವರ ಕೀಳರಿಮೆಯನ್ನು ಹೋಗಲಾಡಿಸಿತು. ಪರಿಸರ ಉಳಿಸುವ ಬಗೆಗಿನ ಕಾಳಜಿಯ ಕಾರ್ಯಕ್ರಮ ಕೂಡಾ ಅನುಕರಣೀಯ.

—ಇಳಾ ಆಚಾರ್ಯ, ಹುಂಚ

## ಏಕಮ್ಮ ಹೀಗೆ?

'ಝೀ' ವಾಹಿನಿಯಲ್ಲಿ ಪ್ರಸಾರವಾಗುವ 'ಗಂಗಾ' ಧಾರಾವಾಹಿಯಲ್ಲಿ ಹುಡುಗಿ ವಿಧವೆ. ಶ್ವೇತ ವಸ್ತ್ರ ಧರಿಸುತ್ತಾಳೆ, ನಿರ್ದೇಶಕರು ಈ ಜಾಗತೀಕರಣದ ಕಾಲಕ್ಕೂ ಇಂತಹ ದೃಶ್ಯ ಸೃಷ್ಟಿಸಿದ್ದಾರೆ. ಮಹಿಳೆಯರೇ ಅತಿ ಹೆಚ್ಚು ನೋಡುವ ಈ ಧಾರಾವಾಹಿಯನ್ನು ಅವರ ಮಕ್ಕಳು ನೋಡಿ 'ಏಕಮ್ಮಾ ಹೀಗೆ' ಎಂದು ಪ್ರಶ್ನಿಸುವ ಹಂತಕ್ಕೆ ಅಥವಾ ಸ್ವತಃ ನೊಂದುಕೊಳ್ಳುವ ಹಂತಕ್ಕೆ ನಿರ್ದೇಶಕರು ಈ ಧಾರಾವಾಹಿಯನ್ನು ಒಯ್ಯಬಾರದು.

—ಎಚ್. ಆನಂದ್ ಕುಮಾರ್, ಚಿತ್ರದುರ್ಗ

## ಮೂಡಿದ ಬೇಸರ

ಸೋಮವಾರದಿಂದ ಶನಿವಾರದವರೆಗೆ ಪ್ರತಿದಿನ ಸಂಜೆ 6.30 ರಿಂದ 7.00 ಗಂಟೆಗೆ, 'ಸುವರ್ಣ' ಕನ್ನಡ ವಾಹಿನಿಯಲ್ಲಿ, ಪ್ರಸಾರವಾಗುತ್ತಿರುವ ಧಾರಾವಾಹಿ, 'ಗುಂಡ್ಯಾನ ಹೆಂಡ್ತಿ' ಇದುವರೆಗೂ ಚೆನ್ನಾಗಿ ಮೂಡಿಬರುತ್ತಿತ್ತು. ಇತ್ತೀಚೆಗೆ ಅದು ಸುಮಾರು 5–6 ಕಂತುಗಳಲ್ಲಿ ತಿರುವನ್ನು ಪಡೆದು ಈಗ ವೇಶ್ಯಾವಾಟಿಕೆಯ ಮೇಲೆ ಕೇಂದ್ರೀಕೃತಗೊಂಡಿದೆ.

—ಸುಂದರ್, ಬೆಂಗಳೂರು

## ಕಿನ್ನರಿಗೊಂದು ಕಿವಿಮಾತು

ಈಟಿವಿ ವಾಹಿನಿಯಲ್ಲಿ ಸಂಜೆ ಆರು ಗಂಟೆಗೆ ಪ್ರಸಾರವಾಗುವ 'ಕಿನ್ನರಿ' ಧಾರಾವಾಹಿಯ ಆರಂಭ ಎಷ್ಟು ಚೆನ್ನಾಗಿತ್ತು ಎಂದರೆ ಯಾವಾಗ ಸಂಜೆಯಾಗುತ್ತೋ ಎಂದು ಮನೆ ಮಂದಿಯೆಲ್ಲಾ ಕಾಯುತ್ತಿದ್ದರು. ಆದರೆ ಇದೀಗ ಅದು ತನ್ನ ಮೊದಲಿನ ಆಕರ್ಷಣೆ ಕಳೆದುಕೊಂಡಿದೆ.

ಮಣಿ ತನ್ನ ಅಮ್ಮ ಎಂದುಕೊಂಡ ಆ ಮಣ್ಣಿನ ಬೊಂಬೆಯೊಡನೆ ಪ್ರತಿದಿನ ಮಾತಾಡುವುದು ಬೋರ್ ಹೊಡೆಸುತ್ತಿದೆ. ಮಣಿಯ ನಟನಾ ಸಾಮರ್ಥ್ಯ ನೋಡಿ ಖುಷಿಯಾದರೂ, ಐಶು ಹಾಗೂ ಮಣಿಯ ನಡುವಿನ ಮತ್ಸರ ಮತ್ತು ಜಗಳ ಮಕ್ಕಳ ಮನಸ್ಸನ್ನು ಹಾಳು ಮಾಡುವಷ್ಟು ಅತಿಯಾಗುತ್ತಿದೆ. ಇನ್ನು ಎನ್.ಜಿ.ಓ.ದ ಸೌಮ್ಯ ಹಾಗೂ ಅವಳ ಮ್ಯಾನೇಜರ್ ಪಾತ್ರಗಳು ಕಥೆಯನ್ನು ವಿಸ್ತರಿಸಲು ಬಂದ ಅನಗತ್ಯ ಸಂಬಂಧಗಳು ಎನಿಸುತ್ತಿವೆ.

—ಮಾಲತಿ ರಾಮಕೃಷ್ಣ ಭಟ್, ಸಿದ್ದಾಪುರ

## ಹೆಚ್ಚಿದ ನಾಟಕ ರುಚಿ

ಝೀ ಕನ್ನಡ ವಾಹಿನಿಯ ಡ್ರಾಮಾ ಜೂನಿಯರ್ಸ್ ನಿಜವಾಗಿಯೂ ಅತ್ಯುತ್ತಮವಾದ ಕಾರ್ಯಕ್ರಮ. ಇತ್ತೀಚೆಗೆ ಶಾಲಾ ವಾರ್ಷಿಕೋತ್ಸವಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಹಾಡುಗಳ ಸಿ.ಡಿ. ಹಾಕಿ ಕುಣಿಯುವುದಕ್ಕೆ ಮಾತ್ರ ಸೀಮಿತವಾಗಿತ್ತು. ಈ ಕಾರ್ಯಕ್ರಮ ಮಕ್ಕಳಿಂದ ಹಿಂದೆ ಸರಿದಿದ್ದ ನಾಟಕವನ್ನು ಮತ್ತೆ ಅವರೆಡೆಗೆ ತಂದಿದ್ದಲ್ಲದೆ. ಹಿರಿಯರಿಗೂ ಮಾರ್ಗದರ್ಶಕವಾಗಿದೆ. ನವರಸಭರಿತವಾಗಿ ವಿಪುಲ ಮನರಂಜನೆಯನ್ನೂ ಒದಗಿಸುತ್ತಿದೆ. ಮೆಂಟರ್‌ಗಳ ಶ್ರಮ ಶ್ಲಾಘನೀಯ, ತೀರ್ಪುಗಾರರು ಉದಾತ್ತ ಚಿಂತನೆಗಳನ್ನೊಳಗೊಂಡ ತೂಕದ ಮಾತುಗಳನ್ನಾಡುತ್ತಾರೆ. ನಿರೂಪಕ ಆನಂದರಿಗೂ ಈ ಮಾತು ಸಲ್ಲುತ್ತದೆ. ಒಟ್ಟಿನಲ್ಲಿ ಡ್ರಾಮಾ ಜೂನಿಯರ್ಸ್ ಎಲ್ಲಾ ವಯೋಮಾನದವರಿಗೂ ರಸದೌತಣ. ಟಿವಿ ವಾಹಿನಿಗೆ ಮತ್ತು ತಂಡಕ್ಕೆ ಧನ್ಯವಾದಗಳು. ವಿಶೇಷವಾಗಿ ಮಕ್ಕಳಿಗೆ ಎದೆ ತುಂಬಿದ ಶುಭಾಶಯಗಳು.

—ವಿಜಯಕುಮಾರ್, ಹುತ್ತನಹಳ್ಳಿ

## ವೈಭವೀಕರಣ ಬೇಕಿತ್ತಾ?

ಸುಳ್ಳು, ಮೋಸ ಹಾಗೂ ವಂಚನೆಗಳ ಸರಮಾಲೆಯನ್ನೇ ಹೊತ್ತುಕೊಂಡು, ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿದೆ 'ಪುಟ್ಟ ಗೌರಿ (ಸುಳ್ಳು) ಮದುವೆ' ಧಾರಾವಾಹಿ. ಕಳೆದ ವಾರದಿಂದ ಗೌರಿಯ ತಾಯಿ ಭಾಗ್ಯ ಅವರ ಸಾವಿನ ದೃಶ್ಯವನ್ನು ಸತ್ತ ಸಂದರ್ಭದಿಂದ ಅಂತ್ಯಸಂಸ್ಕಾರದವರೆಗೆ ಪ್ರತಿ ಕಂತಿನಲ್ಲಿ ಎಳೆ ಎಳೆಯಾಗಿ ಎಳೆದುಕೊಂಡು ವಾರಗಟ್ಟಳೆ ವೈಭವೀಕರಿಸಿ ತೋರಿಸುವ ಅವಶ್ಯಕತೆಯಿತ್ತೇ?

—ಬಿ. ಚಾಮರಾಜ ಅರಸ್, ಮೈಸೂರು; ಮಾಲತಿ ಪುರುಷೋತ್ತಮ್, ಬೆಂಗಳೂರು; ಬಿ.ಎಸ್. ಚಂದ್ರಶೇಖರ್, ಬೆಂಗಳೂರು; ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ; ಪ್ರಮೀಳಾ, ಉಜಿರೆ; ದಿವ್ಯಾಶ್ರೀ, ಉಜಿರೆ; ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ